ಅಸಲ ದಾವಾ ಸಂಖ್ಯೆ: **93/2014**

ಪಿ.ಡಬ್ಲೂ.: **01**

<u>ಸಾಕ್ಷಿಯನ್ನು ಇಂದು ದಿನಾಂಕ: **09.01.2019** ರಂದು ಪುನ: ಕರೆಯಿಸಿ ಪ್ರಮಾಣಿಕರಿಸಲಾಯಿತು.</u>

<u>ಪಾಟೀ ಸವಾಲು: **1** ರಿಂದ **7** ನೇ ಪ್ರತಿವಾದಿ ಪರ ಶ್ರೀ ಎಸ್ ಎನ್ ಎಸ್ ವಕೀಲರಿಂದ</u>

ದಾವಾ ಆಸ್ತಿಗಳ ಮೂಲಪುರಷ ಭೀಮಪ್ಪ ವಿಠ್ಠಪ್ಪ ವಾಲೀಕಾರ ಅಂದರೆ ಸರಿ. ಸದರಿಯವರು **1973** ರಲ್ಲಿ ಮರಣ ಹೊಂದಿರುತ್ತಾರೆ ಅಂದರೆ ಸರಿ. ಅವರಿಗೆ **6** ಜನ ಗಂಡುಮಕ್ಕಳು ಇದ್ದರು ಅಂದರೆ ಸರಿ. ಅವರು ಮರಣ ಹೊಂದಿದ ನಂತರ ಸದರಿಯವರ ಜಮೀನುಗಳು ಅವರ **6** ಜನ ಮಕ್ಕಳ ನಡುವೆ ವಾರಸಾ ಆಗಿರುತ್ತದೆ ಅಂದರೆ ಸರಿ. ಆ ಪೈಕಿ ಸ.ನಂ.**146/2** ಕ್ಷೇತ್ರ **7** ಎಕರೆ ಜಮೀನು ಅವ್ವಣ್ಣಾ ವಿಠ್ಠಪ್ಪ ವಾಲೀಕಾರ ರವರ ಪಾಲಿಗೆ ಬಂದಿರುತ್ತದೆ ಅಂದರೆ ಸರಿ. ಅದೇ ರೀತಿ ಸ.ನಂ.**56** ರಲ್ಲಿ **5** ಎಕರೆ **10** ಗುಂಟೆ ಜಮೀನು ಶಿವಲಿಂಗಪ್ಪ ವಿಠ್ಠಪ್ಪ ವಾಲೀಕಾರ ರವರ ಪಾಲಿಗೆ ಬಂದಿರುತ್ತದೆ ಅಂದರೆ ಸರಿ. ಅದೇ ರೀತಿ ಸ.ನಂ.**146/1 07** ಎಕರೆ **19** ಗುಂಟೆ**,** ಸ.ನಂ.**138** ರಲ್ಲಿ **30** ಎಕರೆ **2** ಗುಂಟೆ ಜಮೀನು ಈ ಎರಡೂ ಜಮೀನುಗಳನ್ನು ಭೀಮಪ್ಪ ವಾಲೀಕಾರ ರವರ **6** ಜನ ಮಕ್ಕಳ ಹೆಸರಿನಲ್ಲಿ ಒಟ್ಟಿಗೆ ಇಟ್ಟಿರುತ್ತಾರೆ ಅಂದರೆ ಸರಿ. ಆ ಪ್ರಕಾರ ನಿ.ಪಿ.**21** ದಾಖಲಾಗಿರುತ್ತದೆ ಅಂದರೆ ಸರಿ.

ನನ್ನತಂದೆ ಅವ್ವಣ್ಣಾ ವಾಲೀಕಾರ ರವರು **8** ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ನಮ್ಮ ತಂದೆಯವರು ಅವರ ಜೀವಿತಾವಧಿಯಲ್ಲಿ ತಮ್ಮ ಪಾಲಿಗೆ ಬಂದಿದ್ದ **7** ಎಕರೆ ಜಮೀನಿನಲ್ಲಿ ಸಾಗುವಳಿ ಮಾಡುತ್ತಿದ್ದರು ಅಂದರೆ**,** ಸಾಕ್ಷಿಯು **14** ಎಕರೆ ಜಮೀನಿನಲ್ಲಿ ಸಾಗುವಳಿ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನಿ.ಪಿ.**21** ರ ಪ್ರಕಾರ ನಮ್ಮ ತಂದೆಯ ಪಾಲಿಗೆ ಬಂದ **7** ಎಕರೆ ಜಮೀನಿನಲ್ಲಿ

ಮಾತ್ರ ನಮ್ಮ ತಂದೆಯವರು ಕಬ್ಜಾ ವಹಿವಾಟು ಮಾಡುತ್ತಿದ್ದರು ಅಂದರೆ ಸರಿಯಲ್ಲ. ನಾನು ಹಾಜರು ಮಾಡಿರುವ ದಾಖಲೆಯಲ್ಲಿ ನಮ್ಮ ತಂದೆಯವರು **7** ಎಕರೆ ಜಮೀನನ್ನು ಮಾತ್ರ ಕಬ್ಜಾ ವಹಿವಾಟು ಮಾಡುತ್ತಿದ್ದರು ಎಂದು ಕಂಡುಬರುತ್ತದೆ ಅಂದರೆ ಸರಿಯಲ್ಲ. ನಿ.ಪಿ.**28** ಮತ್ತು **29** ರಲ್ಲಿ ನಮ್ಮ ತಂದೆಯ ಹೆಸರು ಕೇವಲ **7** ಎಕರೆ ಜಮೀನಿಗೆ ದಾಖಲಾಗಿದೆ ಅಂದರೆ ಸರಿ, ಸಾಕ್ಷಿಯು ಮುಂದುವರೆದು ವಾರಸಾ ಮಾತ್ರ **7** ಎಕರೆಗೆ ದಾಖಲಾಗಿರುತ್ತದೆ, ಆದರೆ ನಾವು **14** ಎಕರೆ ಜಮೀನನ್ನು ಸಾಗುವಳಿ ಮಾಡುತ್ತಿದ್ದೇವೆ ಅಂತಾ ಸ್ವತಃ ನುಡಿಯುತ್ತಾರೆ. ನಮ್ಮ ತಂದೆಯವರು ಅವರ ಜೀವಿತಾವಧಿಯಲ್ಲಿ ತಾವು ಸಾಗುವಳಿ ಮಾಡುತ್ತಿರುವ ಜಮೀನಿಗೆ ಸಂಬಂಧಿಸಿದಂತೆ, ವಿಭಾಗ ಸರಿಯಿಲ್ಲ, ಅಥವಾ ಡ. ರದ್ದು ಮಾಡಿ ಎಂದು ಯಾವುದೇ ದಾವೆಯನ್ನು ಸಲ್ಲಿಸಿಲ್ಲ, ಏಕೆಂದರೆ ಅವರ ಜೀವಿತಾವಧಿಯಲ್ಲಿ ಯಾವುದೇ ವ್ಯಾಜ್ಯ ಕಾರಣ ಉಂಟಾಗದೇ ಇದ್ದರಿಂದ ಮತ್ತು ಸಾಗುವಳಿ ಮಾಡುತ್ತಿದ್ದರಿಂದ ಆ ರೀತಿ ದಾವೆಯನ್ನು ಸಲ್ಲಿಸಿರುವುದಿಲ್ಲ ಎಂದು ಸ್ವತಃ ನುಡಿಯುತ್ತಾರೆ. ನಮ್ಮ ತಂದೆಯವರಿಗೆ **7** ಎಕರೆ ಜಮೀನು ನೀಡಿರುವುದು ಒಪ್ಪಿತವಾಗಿರುವುದರಿಂದ ಅವರು ಯಾವುದೇ ದಾವೆಯನ್ನು ಸಲ್ಲಿಸಿಲ್ಲ ಅಂದರೆ ಸರಿಯಲ್ಲ. ನಮ್ಮ ತಂದೆಯವರು ತೀರಿಕೊಂಡ ನಂತರ ಅವರು ಸಾಗುವಳಿ ಮಾಡುತ್ತಿದ್ದ ಜಮೀನನ್ನು ನನ್ನ ಹೆಸರಿಗೆ ವಾರಸಾ ಮಾಡಿ ಎಂದು ತಾಲೂಕಾ ಕಛೇರಿಗೆ ಅರ್ಜಿ ಸಲ್ಲಿಸಿತರುತ್ತೇನೆ, ಆದರೆ ನನ್ನ ಹೆಸರು **14** ಎಕರೆ ಜಮೀನಿಗೆ ದಾಖಲಾಗಿರುವುದಿಲ್ಲ. ನಾನು ಸರ್ಕಾರಕ್ಕೆ ಕಂದಾಯ ಪಾವತಿ ಮಾಡಿದ ಬಗ್ಗೆ ದಾಖಲೆಯನ್ನು ಇಟ್ಟಿರುವುದಿಲ್ಲ. ನಾನು ಸಾಗುವಳಿ ಮಾಡುತ್ತಿರುವ **14** ಎಕರೆ ಜಮೀನಿಗೆ ಸಂಬಂಧಿಸಿದಂತೆ, ಯಾವುದೇ ಸಾಲವನ್ನು ಮಾಡಿರುವುದಿಲ್ಲ ಮತ್ತು ಸರ್ಕಾರದಿಂದ ಯಾವುದೇ ಸೌಲಭ್ಯವನ್ನು ಸಹ

ಪಡೆದಿರುವುದಿಲ್ಲ. ನಾನು ಸಾಗುವಳಿ ಮಾಡುತ್ತಿರುವ ಜಮೀನಿನ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಮ್ಮ ತಂದೆಯವರು 7 ಎಕರೆ ಜಮೀನನ್ನು ಒಪ್ಪಿಕೊಂಡಿದ್ದರೂ ಸಹ ನಾನು ಈ ರೀತಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ. ನಮ್ಮ ತಂದೆಯವರು ಅವರ ಜೀವಿತಾವಧಿಯಲ್ಲಿ 7 ಎಕರೆ ಜಮೀನನ್ನು ಹೊರತು ಪಡಿಸಿ ಬೇರೆ ಯಾವುದೇ ಜಮೀನನ್ನು ಸಾಗುವಳಿ ಮಾಡುತ್ತಿದ್ದಿಲ್ಲ ಅಂದರೆ ಸರಿಯಲ್ಲ. ನಾನು ಸಹ 7 ಎಕರೆ ಜಮೀನನ್ನು ಹೊರತುಪಡಿಸಿ ಬೇರೆ ಯಾವುದೇ ಜಮೀನನ್ನು ಸಾಗುವಳಿ ಮಾಡುತ್ತಿಲ್ಲ ಅಂದರೆ ಸರಿಯಲ್ಲ. ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಉಕ್ತ ಲೇಖನ ನೀಡಿ ಗಣಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ವ
ಜೆ.ಎಮ್.ಎಫ್.ಸಿ. ಸಿಂದಗಿ.